

# ಟೆಕ್ ವಿರೋಧಿ ಕ್ರಾಂತಿ ಮತ್ತು ಯುನಾಬಾಂಬರ್

ತಾರುಣ್ಯದ ದಿನಗಳಲ್ಲಿ ಟೆಡ್ ಕಜೆನ್ ಸ್ಕಿ

**ಇಪ್ಪತ್ತೈದು ವರ್ಷಗಳ ಹಿಂದೆ 'ಯುನಾಬಾಂಬರ್' ಅಲಿಯಾಸ್ ಟೆಡ್ ಕಜೆನ್ ಸ್ಕಿ ಎನ್ನುವ ವ್ಯಕ್ತಿಯ ಹುಡುಕಾಟ ತೀವ್ರವಾಗಿ ನಡೆಯುತ್ತಿದ್ದಾಗ, ಆತನ ಕುರಿತ ವಿಸ್ತೃತ ಲೇಖನ (ಲೇ: ನಾಗೇಶ ಹೆಗಡೆ) 'ಸುಧಾ'ದಲ್ಲಿ ಪ್ರಕಟಗೊಂಡಿತ್ತು. ಈಗ, ಟೆಡ್‌ನ ಪ್ರತಿಪಾದನೆಗಳಿಗೆ ಮಹತ್ವ ಬಂದಿರುವ ಸಂದರ್ಭದಲ್ಲಿ ಆತನನ್ನು 'ಸುಧಾ' ಮತ್ತೆ ನೆನಪಿಸಿಕೊಳ್ಳುತ್ತಿದೆ.**

■ **ಲಕ್ಷ್ಮೀದೇವಿ ಪಾಟೀಲ**
ಚಿತ್ರಗಳು: ವಿಕಿಕಾಮನ್ಸ್

ಆತನ ಪೂರ್ಣ ಹೆಸರು ಥಿಯೋಡರ್ ಜಾನ್ ಕಜೆನ್‌ಸ್ಕಿ. ಪ್ರತಿಭಾವಂತ ಗಣಿತಜ್ಞ. ಕೈಗಾರಿಕೆಗಳು ಮತ್ತು ತಂತ್ರಜ್ಞಾನ ಬೆಳೆದಂತೆಲ್ಲ ಜಗತ್ತಿಗೆ ದೊಡ್ಡ ಗಂಡಾಂತರ ಕಾದಿದೆ ಎನ್ನುವುದು ಊಹಿಸಿಕೊಂಡು ಆತ ತಲ್ಲಣಗೊಂಡಿದ್ದ. ಪ್ರೊಫೆಸರ್ ಕೆಲಸವನ್ನು ಬಿಟ್ಟು ಕಾಡಿನಲ್ಲಿ ವಾಸಿಸತೊಡಗಿದ. 'ಔದ್ಯಮಿಕ ಸಮಾಜದ ಅಪಾಯಗಳು' ಎಂಬ ತನ್ನ ಪ್ರಬಂಧವನ್ನು ಯಾವ ಪತ್ರಿಕೆಯೂ ಪ್ರಕಟಿಸದೆ ಹೋದಾಗ ವ್ಯಗ್ರಗೊಂಡ. ವಿವಿಧ ಕ್ಷೇತ್ರಗಳ ಪ್ರಮುಖರಿಗೆ ಲೆಟರ್ ಬಾಂಬ್‌ಗಳನ್ನು ಕಳಿಸುತ್ತ, ಅಧಿಕಾರಿಗಳಿಗೆ ಚಳ್ಳೆಹಣ್ಣು ತಿನ್ನಿಸುತ್ತ, ಹದಿನೇಳು ವರ್ಷಗಳ ಕಾಲ ತಲೆಮರೆಸಿಕೊಂಡಿದ್ದ. 'ಯುನಾಬಾಂಬರ್' ಎಂಬ ಹೆಸರಿಟ್ಟು, ಆತನನ್ನು ಹಿಡಿದುಕೊಟ್ಟವರಿಗೆ ಹತ್ತು ಲಕ್ಷ ಡಾಲರ್ ಬಹುಮಾನ ಘೋಷಿಸಲಾಯಿತು. ಕೊನೆಗೂ ಅವನನ್ನು ಬಂಧಿಸುವಲ್ಲಿ ಯಶಸ್ವಿಯಾದ ಅಮೆರಿಕ, ಅಪಾಯಕಾರಿ ಅಪರಾಧಿಗಳನ್ನು ಇರಿಸುವ ಜೈಲಿನಲ್ಲಿ ಅವನನ್ನು ಇರಿಸಿದೆ.

ಜೈಲಿನಲ್ಲಿದ್ದರೂ ಟೆಡ್‌ಗೆ ಹಲವಾರು ಅಭಿಮಾನಿಗಳಿದ್ದಾರೆ. ಪರಿಸರ ಹೋರಾಟಗಾರರ ಸಂಘಟನೆಗಳ ಜೊತೆ ಅವನು ಪತ್ರ ಸಂವಹನ ನಡೆಸುತ್ತಾನೆ. ಅವನ ಸಿದ್ಧಾಂತಗಳನ್ನೊಳಗೊಂಡ ಪುಸ್ತಕಗಳು ಮರುಮುದ್ರಣಗೊಳ್ಳುತ್ತಿವೆ. ಅವನ ಪ್ರತಿಪಾದನೆಯಲ್ಲಿ ಸತ್ಯ ಇದ್ದೀತೆ?



ಟೆಡ್‌ನ ರೂಪಾಂತರ 'ಯುನಾಬಾಂಬರ್'

## ಪ್ರಚಂಡ ಪ್ರತಿಭೆ

ಶಾಲಾ ಹಂತದಲ್ಲಿ ಅಸಾಮಾನ್ಯ ಬುದ್ಧಿವಂತನಾಗಿದ್ದ ಥಿಯೋಡರ್ ಕಜೆನ್‌ಸ್ಕಿ (ಸಂಕ್ಷಿಪ್ತವಾಗಿ ಟೆಡ್ Ted Kaczynski) 6ರಿಂದ